<u>ದಿಃ13-01-15 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

ಮುಪಾಟಿ ಸವಾಲುಃ ಶ್ರೀ ಟಿ ಕೆ ಎಂ ವಕೀಲರಿಂದಃ

ಈ ದಾವೆಯಲ್ಲಿರುವ ರಸ್ತೆಯು ನಮ್ಮ ಊರಿನ ಪಶ್ಚಿಮದಿಂದ ಪೂರ್ವಕ್ಕೆ ಇರುತ್ತದೆ. ದಾವಾ ರಸ್ತೆ ಸ.ನಂ. 70, 75 ಮತ್ತು 80 ರಲ್ಲಿ ಹಾದೂ ಹೋಗುತ್ತದೆ. ಸದರಿ ರಸ್ತೆ ಗಾಡಿ ರಸ್ತೆಯಾಗಿರುತ್ತದೆ. ಮೇಲೆಳಿದ ರಸ್ತೆಯಲ್ಲಿ ಟ್ರಾಕ್ಟರ್ ಒಡಾಡುತ್ತಿರುತ್ತವೆ. ನಮ್ಮ ಊರಿನ ಪೂರ್ವಕ್ಕೆ ಕಾಲು ದಾರಿ ಇರುತ್ತದೆ ಎಂದರೆ ಸರಿಯಲ್ಲ. ಕಾಲು ದಾರಿ ನಮ್ಮ ಊರಿಗೆ ಉತ್ತರ ದಕ್ಷಿಣವಾಗಿ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಊರಿನ ಪೂರ್ವಕ್ಕೆ ಎ ಕೆ ಕಾಲೊನಿ ಬರುತ್ತದೆ ಎಂದರೆ ಸರಿ . ಎ ಕೆ ಕಾಲೂನಿ ಉತ್ತರ ದಕ್ಷಿಣವಾಗಿ ಕಾಲು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಕಾಲು ದಾರಿಯನ್ನು ಹೊರತುಪಡಿಸಿ ಬೇರೆ ಯಾವ ದಾರಿ ಇರುವುದಿಲ್ಲ ಎಂದರೆ ಸಾಕ್ಷಿ ಕಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ. ಮಂಜುನಾಥರವರ ಮನೆಯ ಬಾಗಿಲು ಪೂರ್ವಕ್ಕೆ ಇರುತ್ತದೆ. ಮಂಜುನಾಥರವರ ಮನೆಯ ಉತ್ತರಕ್ಕೆ ಲಕ್ಷ್ಮೀನರಸಪ್ಪನವರ ನಿವೇಶನ ಇರುತ್ತದೆ. ಮಂಜುನಾಥರವರ ಮನೆಯ ಪಶ್ಚಿಮಕ್ಕೆ ಲಕ್ಷ್ಮೀನರಸಪ್ಪನವರ ನಿವೇಶನ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳ ನಿವೇಶನ ಇರುತ್ತದೆ ಎಂದು ಹೇಳಿರುತ್ತಾರೆ. ಲಕ್ಷೀನರಸಪ್ಪ ಮತ್ತು ಮಂಜುನಾಥರವರು ಪ್ರತಿವಾದಿಯ ಅಣ್ಣ ಪುಟ್ಟೆಗೌಡರವರಿಂದ ನಿವೇಶನ ಖರೀದಿ ಮಾಡಿರುತ್ತಾರೆ. ಸದರಿ ನಿವೇಶನ ಪುಟ್ಟೆಗೌಡರಿಗೆ ಕುಟುಂಬದಲ್ಲಿ ಅದಂತಹ ಹಿಸ್ಸೆಯಲ್ಲಿ ಬಂದಿರುತ್ತದೆ. ಪುಟ್ಟೆಗೌಡರು ತನ್ನ ಕೂಟುಂಬದಲ್ಲಿ ಬಂದ ನಿವರ್ೀಶನದಂಲ್ಲಿ ಪೂರ್ವಕ್ಕೆ ಅವರ ಹೆಸರಿಗೆ ಬಂದಿರುತ್ತದೆ . ಪಶ್ಚಿಮಕ್ಕೆ ಪ್ರತಿವಾದಿ ರಾಮಕೃಷ್ಣಯ್ಯನ ಹಿಸ್ಸೆಗೆ ಬಂದಿರುತ್ತದೆ. ಪ್ರತಿವಾದಿಯ ತಂದೆ ಯಾರ ಕಡಡೆಯಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ನಿವೇಶನ ತುಂಬಾ ಹಳೇಯ ನಿವೇಶನ ಅಗಿರುತ್ತದೆ ಎಂದರೆ ಸರಿ . ಪ್ರತಿವಾದಿ ಮತ್ತು ಅತನ ಅಣ್ಣನ ನಿವೇಶನ ಒಟ್ಟು ಪೂರ್ವ ಪಶ್ಚಿಮ 72

ಅಡಿ ಉತ್ತರ ದಕ್ಷಿಣ 42 ಅಡಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ರಾಮಕೃಷ್ಣಯ್ಯ ಮತ್ತು ಆತನ ಅಣ್ಣ ಪುಟ್ಟಯ್ಯನ ನಿವೇಶನದ ಪೂರ್ವಕ್ಕೆ ಎ ಕೆ ಕಾಲೋನಿ ಪಶ್ಚಿಮಕ್ಕೆ ಪಂಚಾಯಿತಿ ರಸ್ತೆ ಉತ್ತರಕ್ಕೆ ಮಠದ ನರಸಿಂಹೆಗೌಡರ ಮನೆ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ವೀರಣ್ಣನ ಮಕ್ಕಳ ಮನೆ ಇರುತ್ತದೆ ಎಂದರೆ ಸರಿ. ಮೇಲೇಳಿದ ಚೆಕ್ಕುಬಂದಿ ಒಳಗಿನ ನಿವೇಶನವನ್ನು ಪುಟ್ಟೆಗೌಡ ಮತ್ತು ಪ್ರತಿವಾದಿ ಹಂಚಿಕೊಂಡಿರುತ್ತಾರೆ. ಪುಟ್ಟೆಗೌಡ ಲಕ್ಷ್ಮಿನರಸಪ್ಪನಿಗೆ ಮಾರಾಟ ಮಾಡಿದ್ದು ಲಕ್ಷ್ಮೀನರಸಪ್ಪ ತನ್ನ ಹಿಸ್ಸೆ ನಿವೇಶನವನ್ನು ಮಂಜುನಾಥರವರಿಗೆ ಮಾರಾಟ ಮಾಡಿರುತ್ತಾರೆ. ಪ್ರತಿವಾದಿಯ ಹೆಂಡತಿ 22ಇಂಟು 22 ಅಡಿ ವಿಸ್ತೀರ್ಣದಲ್ಲಿ ಮನೆ ಕಟ್ಟಿದ್ದಾರೆ. ಪ್ರತಿವಾದಿಯ ಹೆಂಡತಿ ನಾಲ್ಕು ಜಾಗ ಉಳಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಉತ್ತರ ದಿಕ್ಕಿನಲ್ಲಿ ಎಂಟು ಅಡಿ ಜಾಗ ಉಳಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಪ್ರತಿವಾದಿ ಹೆಂಡತಿ ಮನೆಯ ಪಶ್ಚಿಮಕ್ಕೆ ಎಂಟು ಅಡಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ 10 ಅಡಿ ಜಾಗ ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಗಲ್ಲಿ ರಸ್ತೆ ಇರುತ್ತದೆ ಎಂದು ಹೇಳಿರುತ್ತಾರೆ. ನಾನು ಹೇಳಿದ ಹಾಗೆ ಗಲ್ಲಿ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಹೆರಡತಿ ಮನೆಯ ದಕ್ಷಿಣಕ್ಕೆ ಸರ್ಕಾರದ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅತನ ಅಣ್ಣ ನಿವೇಶನ ಬಾಗ ಮಾಡಿಕೊಂಡ ಸಮಯದಲ್ಲಿ ಪ್ರತಿವಾದಿಯು ತನ್ನ ಅಣ್ಣನ ನಿವೇಶನಕ್ಕೆ ಹೋಗಲು ಆರು ಅಡಿ ಜಾಗ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅರು ಅಡಿ ಜಾಗದ ಕಡೆಗೆ ವೀರಣ್ಣನ ಮಕ್ಕಳು ಪ್ರತಿವಾದಿ ಅನುಮತಿ ಮೇರೆಗೆ ಬಾಗಿಲನ್ನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ವೀರಣ್ಣನ ಮನೆ ಪೂರ್ವ ಪಶ್ಚಿಮ 40 ಅಡಿ ಉತ್ತರ ದಕ್ಷಿಣ 20 ಅಡಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ವೀರಣ್ಣನ ಮಕ್ಕಳು ನಿವೇಶನವನ್ನು ವಿಬಾಗ ಮಾಡಿದ ಸಮಯದಲ್ಲಿ ಒಬ್ಬೊಬ್ಬರಿಗೆ 10 ಇಂಟು 20 ಅಡಿ ವಿಸ್ತೀರ್ಣದ ಮನೆ ಅವರ ಹೆಸರಿಗೆ ಬಂದಿದ್ದರಿಂದ ಪ್ರತಿವಾದಿಯ ಅನುಮತಿಯನ್ನು ಪಡೆದು ಅರು ಅಡಿ ಜಾಗದ ಕಡೆ ಎಲ್ಲರೂ ಬಗಗಿಲನ್ನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ

ಸಾಕ್ಷಿಯು ಮುಂದುವರಿದು ಎಲ್ಲರೂ ರಸ್ತೆಯ ಕಡೆಗೆ ಮುಂಚೆಯಿಂದಲೂ ಬಾಗಿಲನ್ನು ಇಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ವೀರಣ್ಣನ ಮನೆಯ ಬಾಗಿಲು ಪಶ್ಚಿಮಕ್ಕೆ ಇತ್ತು ಎಂದರೆ ಸರಿಯಲ್ಲ. ನನ್ನ ರೊಪ್ಪದ ಉತ್ತರಕ್ಕೆ ದಾರಿ ಇರುತ್ತದೆ. ನನ್ನ ರೊಪ್ಪದ ಉತ್ತರಕ್ಕೆ ಇರುವ ರಸ್ತೆ ತುಂಗಾನಹಳ್ಳಿ ಕಡೆಯಿಂದ ಬಂದಿರುತ್ತದೆ. ತುಂಗಾನಹಳ್ಳಿ ನನ್ನ ರೊಪ್ಪದ ಪೂರ್ವಕ್ಕೆ ಇರುತ್ತದೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿರುವ ಗುಡಿಸಲು ನನ್ನದೆ ಎಂದು ಹೇಳಿರುತ್ತಾರೆ ಮತ್ತು ಗುಡಿಸಿಲಿನ ಉತ್ತರಕ್ಕೆ ರಸ್ತೆ ಇರುತ್ತದೆ ಎಂದು ಹೇಳಿರುತ್ತಾರೆ ಸಾಕ್ಷಿ ಒಪ್ಪಿಕೊಂಡ ಭಾವ ಚಿತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. 1 ನೇ ವಾದಿಯ ಮನೆಯ ಪಶ್ಚಿಮಕ್ಕೆ ದಾರಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗುಡಿಸಲಿನ ಉತ್ತರಕ್ಕೆ ಇರುವ ದಾರಿ ರಮೇಶನ ಮನೆಯವರೆಗೂ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಗುಡಿಸಲು ಉತ್ತರಕ್ಕೆ ಇರುವ ರಸ್ತೆ ಲಕ್ಷ್ಮಿ ದೇವಸ್ಥಾನಕ್ಕೆ ಹೋಗುತ್ತದೆ. ನಮ್ಮ ಊರಿನ ಪೂರ್ವಕ್ಕೆ ಯಾವುದೆ ಬಂಡಿ ರಸ್ತೆಇರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸನಲ್ಲಿ ಕೇಳಿರುವ ದಾರಿ ಪ್ರತಿವಾದಿ ಹೆಂಡತಿ ಕಟ್ಟಿರುವ ಮನೆಯ ದಕ್ಷಿಣಕ್ಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಒಂದೆ ಒಂದು ಪಂಚಯಿತ ರಸ್ತೆ ಇದ್ದು ಅದು ವಾದಿ ಮತ್ತು ಪ್ರತಿವಾದಿಗಳ ಮನೆಯ ಪಶ್ಚಿಮಕ್ಕೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿ ಯಾವುದೇ ರಸ್ತೆಯನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿ 42ಇಂಟು 36 ಅಡಿ ವಿಸ್ತೀರ್ಣದ ನಿವೇಶನದಲ್ಲಿ 22 ಇಂಟು 23 ಅಡಿ ವಿಸ್ತೀರ್ಣದ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ಈ ದಾವೆಯಲ್ಲಿ ಎಲ್ಲೂ ಸಾರ್ವಜನಿಕ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಾನು ಚಿಕ್ಕಪ್ಪನಾಗಿರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ,

ಸಿ ಜೆ ಕೊರಟಗೆರೆ